ಬಂದಿರುತ್ತದೆ. ಆದಕಾರಣ ಈ ವಿಷಯವು ಸಾರ್ವಜನಿಕ ಮಹತ್ವದ ವಿಷಯವಾಗಿರುವುದರಿಂದ ಶೂನ್ಯ ವೇಳೆಯಲ್ಲಿ ಪ್ರಸ್ತಾಪಿಸಬಯಸುತ್ತೇನೆ.

ಶ್ರೀ ಡಿ.ಬಿ.ಚಂದ್ರೇಗೌಡ (ಸನ್ಮಾನ್ಯ ಸಂಸದೀಯ ಮತ್ತು ಕಾನೂನು ಸಚಿವರು): ಮಾನ್ಯ ಅಧ್ಯಕ್ಷರೆ, ಇದು ಕೋರ್ಟ್‌ಗೆ ಸಂಬಂಧಪಟ್ಟಂಥ ವಿಚಾರ. ನಾನು ಕೂಡ ಇವರು ಕಳುಹಿಸಿದಂಥ ಮಾಹಿತಿಗಳಿಗಾಗಿ, ಹೈಕೋರ್ಟ್‌ನ ರಿಜಿಸ್ಟ್ರಾರ್‌ರವರ ಮೂಲಕ ವರದಿಯನ್ನು ಮೂಲಕವರ ಕಳುಹಿಸಿಕೊಡಲು ಹೇಳಿದ್ದೆ. ರಾಜ್ಯಾಂಗದ 235ನೇ ವಿಧಿಯಂತೆ ಮಾಹಿತಿಗಳನ್ನು ಒದಗಿಸಲಾಗುವುದಿಲ್ಲ ಎಂದು ಅವರು ಹೇಳಿದ್ದಾರೆ. ಅದನ್ನು ಹೈಕೋರ್ಟ್‌ನ ಹಿರಿಯ ಪ್ರಾಕ್ಟೀಸಿಂಗ್ ಅಡ್ವೋಕೇಟ್. . . ಅವರ ಗಮನಕ್ಕೆ ಹಾಗೂ ಅವರ ಮಡಿಲಿಗೇ ವಿಚಾರವನ್ನು ಹಾಕಿದ್ದೇನೆ. ಏಕೆಂದರೆ ಇದು ಸರಕಾರದ ಕೈಯ್ಯಲ್ಲಿಲ್ಲ. ಹೈಕೋರ್ಟ್‌ನವರು ಮಾಹಿತಿಗಳನ್ನು ನಮಗೆ ಕಳುಹಿಸಿಕೊಟ್ಟರೆ ಮಾತ್ರ ನಾವು ಇಲ್ಲಿ ಕೊಡಬಹುದು. ಅವರು ಕಳುಹಿಸುವುದಕ್ಕೆ ಆಗುವುದಿಲ್ಲ ಅಂದರೆ ನಾವೇನೂ ಮಾಡುವುದಕ್ಕಾಗುವುದಿಲ್ಲ.

ಶ್ರೀ ಕೆ.ಎನ್.ಸುಬ್ಬಾರೆಡ್ಡಿ: ಮಾನ್ಯ ಅಧ್ಯಕ್ಷರೆ, ಈ ವಿಚಾರವು ನ್ಯಾಯಾಧೀಶರ ವರ್ತನೆ ಬಗ್ಗೆ ಆಗಲಿ, ಜಡ್ಜ್‌ಮೆಂಟ್ ಬಗ್ಗೆಯಾಗಲೀ ನಾವಿಲ್ಲಿ ಪ್ರಸ್ತಾಪ ಮಾಡಿಲ್ಲ. ನಾವು ಕೇಳಿರತಕ್ಕಂಥಾದ್ದು ಇನ್‌ಸಿಡೆಂಟಲ್ ಆಗಿ what are the facts, how many people were interviewed, and how many were selected, who are those who have been selected. Art.211 of the Constitution immunity is there. We canot discuss the conduct of Judges. ಜಡ್ಜ್‌ಸ್‌ರವರ ವರ್ತನೆ ಬಗ್ಗೆ ನಾವು ಕೇಳುತ್ತಾ ಇಲ್ಲ. ಶೀರ್ಷಗಳ ಬಗ್ಗೆ ಕೇಳುತ್ತಿಲ್ಲ. ಈ ವಿಷಯದ ಬಗ್ಗೆ ತಾವುಗಳು ದೀರ್ಘವಾಗಿ ಯೋಚನೆ ಮಾಡಿ. ಏಕೆಂದರೆ, ಇದು ಬಹಳ ಮುಖ್ಯವಾದ ವಿಚಾರ...

ಅಧ್ಯಕ್ಷರು: ಸುಬ್ಬಾರೆಡ್ಡಿಯವರೆ, ನಾನು ಇಲ್ಲಿ ಸದಸ್ಯನಿದ್ದಾಗ ನನ್ನ ಅನುಭವದ ಪ್ರಕಾರ ಇಂಥ ವಿಚಾರಗಳಲ್ಲಿ ಹೈಕೋರ್ಟ್‌ನವರನ್ನು ಅನೇಕ ಸಲ ಸ್ಪಾಟಿಫಿಕಲ್ ಇನ್‌ಫಾರ್ಮೇಶನ್ ಕೇಳಿದಾಗ ಇದೇ ತರಹದ ಉತ್ತರಗಳು ಬಂದಿವೆ. ಆದರ ಬಗ್ಗೆ ನಾವು ಕುಳಿತುಕೊಂಡು ಬಿಎಸಿ.ಮೀಟಿಂಗ್‌ನಲ್ಲಿ ಇಟ್ಟು ಇಂಥ ಸಬ್‌ಜೆಕ್ಟ್ಸ್ ಬಗ್ಗೆ ಏನು ಮಾಡಬೇಕೆಂದು ಮಾಡೋಣ. ಓಪನ್ ಆಗಿ ಆರ್ಟಿಕಲ್ 211ರ ಪ್ರಕಾರ ಆ ಬಗ್ಗೆ ಡಿಸಕಸ್ ಮಾಡುವುದು ಅಷ್ಟು ಚೆನ್ನಾಗಿ ಇರುವುದಿಲ್ಲ. ಬಿಎಸಿ. ಮೀಟಿಂಗ್‌ನಲ್ಲಿ ಎಲ್ಲಾ ವಿರೋಧ ಪಕ್ಷದ ನಾಯಕರುಗಳ ಜೊತೆಗೆ ಮಾತನಾಡೋಣ. ಈಗ ಆ ಪ್ರಸ್ತಾಪ ಬೇಡ.

5. ಗಮನ ಸೆಳೆಯುವ ಸೂಚನೆ

ನವದೆಹಲಿಯ ಕರ್ನಾಟಕ ಭವನದಲ್ಲಿ ತಾತ್ಕಾಲಿಕವಾಗಿ ಕಾರ್ಯನಿರ್ವಹಿಸುತ್ತಿರುವ ನೌಕರರುಗಳನ್ನು ಖಾಯಂಗೊಳಿಸದಿರುವುದರಿಂದ ಹಂಗಾಮಿ ನೌಕರರುಗಳಿಗೆ ಉಂಟಾಗಿರುವ ತೊಂದರೆ.

ಶ್ರೀ ಎ.ಎಸ್.ಗುರುಸ್ವಾಮಿ (ಚಾಮುಂಡೇಶ್ವರಿ): ಮಾನ್ಯ ಅಧ್ಯಕ್ಷರೆ, ನವದೆಹಲಿಯ ಕರ್ನಾಟಕ ಭವನದಲ್ಲಿ ತಾತ್ಕಾಲಿಕವಾಗಿ ಕಾರ್ಯ ನಿರ್ವಹಿಸುತ್ತಿರುವ ನೌಕರರುಗಳನ್ನು

ಖಾಯಂಗೊಳಿಸದಿರುವುದರಿಂದ ಹಂಗಾಮಿ ನೌಕರರಿಗೆ ಉಂಟಾಗುತ್ತಿರುವ ತೊಂದರೆಯ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರ ಗಮನವನ್ನು ಸೆಳೆಯ ಬಯಸುತ್ತೇನೆ.

ಶ್ರೀ ಡಿ.ಬಿ.ಚಂದ್ರೇಗೌಡ (ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, ಮಾನ್ಯ ಮುಖ್ಯಮಂತ್ರಿಯವರ ಪರವಾಗಿ ಈ ಹೇಳಿಕೆಯನ್ನು ಸದನಕ್ಕೆ ನೀಡುತ್ತಿದ್ದೇನೆ.

ನವದೆಲಿಯ ಕರ್ನಾಟಕ ಭವನದಲ್ಲಿ ಯಾವುದೇ ನೌಕರರುಗಳು ತಾತ್ಕಾಲಿಕವಾಗಿ ಕಾರ್ಯ ನಿರ್ವಹಿಸುತ್ತಾ ಇಲ್ಲದೇ ಇರುವುದರಿಂದ, ಇದರಿಂದ ಹಂಗಾಮಿ ನೌಕರರುಗಳಿಗೆ ಅನಾನುಕೂಲವಾಗುತ್ತಿದೆ ಎಂಬ ಪ್ರಶ್ನೆ ಉದ್ಭವಿಸುವುದಿಲ್ಲ.

ಆದಾಗ್ಯೂ ಸಹ ತುರ್ತು ಆಗತ್ಯದ ಮೇಲೆ ಒಬ್ಬರು ಎಲೆಕ್ಟ್ರಿಷಿಯನ್, ಇಬ್ಬರು ಪ್ಲಂಬರ್ ಹಾಗೂ ಇಬ್ಬರು ಶೀಪ್ರಲಿಪಿಗಾರರನ್ನು ಒಂದು ವರ್ಷದ ಅವಧಿಗೆ ಗುತ್ತಿಗೆ ಆಧಾರದ ಮೇಲೆ ಕರ್ನಾಟಕ ಭವನದಲ್ಲಿ ನೇಮಕ ಮಾಡಿಕೊಂಡು ಭವನದ ಅತ್ಯಗತ್ಯವಾದ ವಿದ್ಯುಚ್ಛಕ್ತಿ, ಕುಶಲಕರ್ಮಿ, ನಿರ್ಮಲೀಕರಣ, ನೀರು ಸರಬರಾಜು ಇತ್ಯಾದಿ ಅತಿ ತುರ್ತು ಕೆಲಸಗಳನ್ನು ನಿರ್ವಹಿಸಲಾಗುತ್ತಿದೆ.

ಎಲೆಕ್ಟ್ರಿಷಿಯನ್ ಮತ್ತು ಪ್ಲಂಬರ್ ಹುದ್ದೆಗಳನ್ನು ದೆಹಲಿ ವಿದ್ಯುಚ್ಛಕ್ತಿ ಸರಬರಾಜು ನಿಯಮಿತ ಮುನಿಸಿಪಲ್ ಕಾರ್ಪೊರೇಷನ್‌ನಿಂದ ಅಥವಾ ಕರ್ನಾಟಕ ಲೋಕೋಪಯೋಗಿ ಇಲಾಖೆಯಿಂದ ನಿಯೋಜನೆ ಅಥವಾ ಎರವಲು ಸೇವೆಯ ಮೇಲೆ ಪಡೆದುಕೊಳ್ಳಬೇಕಾಗಿದ್ದು, ಯಾವುದೇ ಸೂಕ್ತ ಅಭ್ಯರ್ಥಿಗಳು ಕರ್ನಾಟಕದಿಂದ ದೆಹಲಿಗೆ ಹೋಗಲು ಮುಂದೆ ಬಾರದೇ ಇದ್ದ ಕಾರಣ, ತುರ್ತು ಆಗತ್ಯ ಕೆಲಸಗಳನ್ನು ನಿರ್ವಹಿಸುವುದಕ್ಕೋಸ್ಕರ ಒಂದು ವರ್ಷದ ಅವಧಿಗೆ ಮಾತ್ರ ಗುತ್ತಿಗೆ ಆಧಾರದ ಮೇಲೆ ಮೇಲ್ಕಂಡವರನ್ನು ನೇಮಕ ಮಾಡಿಕೊಳ್ಳಲಾಗಿದೆ.

ಶೀಪ್ರಲಿಪಿಗಾರರ ಖಾಲಿ ಹುದ್ದೆಗಳನ್ನು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಅಭ್ಯರ್ಥಿಗಳನ್ನು ಖಾಯಂ ಆಗಿ ವ್ಯಂದ ಮತ್ತು ನೇಮಕಾತಿ ನಿಯಮಗಳ ಪ್ರಕಾರ ನೇಮಕ ಮಾಡಬೇಕಾಗಿದ್ದು, ಈ ಪಂಗಡಕ್ಕೆ ಸೇರಿದ ಸೂಕ್ತ ಅಭ್ಯರ್ಥಿಗಳು ದೆಹಲಿಗೆ ಹೋಗಲು ಬಾರದೇ ಇದ್ದುದರಿಂದ ಹಾಗೂ ಭವನದ ಕಾರ್ಯಕಲಾಪಗಳು ಹೆಚ್ಚಾದ್ದರಿಂದ, ತಾತ್ಕಾಲಿಕವಾಗಿ ಒಂದು ವರ್ಷದ ಅವಧಿಗೆ ಇಬ್ಬರು ಶೀಪ್ರಲಿಪಿಗಾರರನ್ನು ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಳ್ಳಲಾಗಿದೆ. ಗುತ್ತಿಗೆ ಆಧಾರದ ಮೇಲೆ ಕಾರ್ಯ ನಿರ್ವಹಿಸುತ್ತಿರುವ ಸದರಿ ನೌಕರರ ಸೇವೆಯನ್ನು ಖಾಯಂಗೊಳಿಸಲು ನಿಯಮಗಳಲ್ಲಿ ಅವಕಾಶವಿರುವುದಿಲ್ಲ.

5.10 ಪಿಎಂ

+ ಶ್ರೀ ಎ.ಎಸ್.ಗುರುಸ್ವಾಮಿ: ಮಾನ್ಯ ಅಧ್ಯಕ್ಷರೆ, ಸರ್ಕಾರ ಮನಸ್ಸು ಮಾಡಿದರೆ, ಪ್ರಾಪರ್ ಅಡ್ವರ್ಟೈಸ್ ಮಾಡಿದರೆ, ಪ್ರಯತ್ನ ಮಾಡಿದರೆ ಬಹುಶಃ ಕನ್ನಡಿಗರು ದೆಹಲಿಗೆ ಹೋಗುತ್ತಾರೆ ಕೆಲಸ ಮಾಡುತ್ತಾರೆನ್ನುವ ನಂಬಿಕೆ ನನಗಿದೆ. ದಯಮಾಡಿ ನಾನು ತಮ್ಮ ಮೂಲಕ ಸರ್ಕಾರದಲ್ಲಿ ಮನವಿ ಮಾಡುತ್ತೇನೆ. ಅಡ್ವರ್ಟೈಸ್‌ಮೆಂಟ್ ಕೊಟ್ಟು ಒಳ್ಳೆಯ ಕನ್ನಡಿಗರನ್ನು

ಅಪಾಯಿಂಟ್‌ಮೆಂಟ್ ಮಾಡುವಂತಹದ್ದು ನಮ್ಮ ಎಲ್ಲ ಶಾಸಕರ ದೃಷ್ಟಿಯಿಂದ ಹಾಗೂ ಅಲ್ಲಿಗೆ ಹೋಗತಕ್ಕ ಕನ್ನಡದ ಜನತೆಗೆ ತುಂಬಾ ಅನುಕೂಲವಾಗುತ್ತದೆಂದು ಒತ್ತಾಯ ಮಾಡುತ್ತಾ, ಟೆಂಪರರಿಯಾಗಿ ಮುಂದುವರಿಸಿಕೊಂಡು ಖಾಯಂ ಮಾಡದೇ ಇರತಕ್ಕ ಪರಿಸ್ಥಿತಿಯನ್ನು ನೋಡಿದರೆ ದೆಹಲಿ ಸ್ಟ್ಯಾಂಡರ್ಡ್ ಆಫ್ ಲೀವಿಂಗ್ ತಾವು ನೋಡಿದಾಗ ಅವರಿಗೆ ಸಿಗತಕ್ಕ ಸೌಲಭ್ಯಗಳು ಬಹಳ ಕಡಿಮೆಯಾಗುತ್ತದೆ. ಅವರ ಜೀವನಕ್ಕೆ ತೊಂದರೆಯಾಗುತ್ತದೆ ಎನ್ನುವ ಮಾತನ್ನು ಸರ್ಕಾರ ಗಮನದಲ್ಲಿಟ್ಟುಕೊಳ್ಳಬೇಕೆಂದು ಹೇಳುವುದಕ್ಕೆ ಬಯಸುತ್ತೇನೆ.

ಶ್ರೀ ಡಿ.ಬಿ.ಚಂದ್ರೇಗೌಡ: (ಕಾನೂನು, ಸಂಸದೀಯ ಸಚಿವರು) ಮಾನ್ಯ ಅಧ್ಯಕ್ಷರೆ, ನಾನು ದೆಹಲಿಯಲ್ಲಿ 15 ವರ್ಷಗಳ ಕಾಲ ಕೆಲಸ ಮಾಡಿದ್ದೇನೆ. ಹೇಳುವಷ್ಟು ಸುಲಭ ಅಲ್ಲ. ಎಲ್ಲಾ ಪ್ರಕ್ರಿಯೆಗಳನ್ನು ಮಾಡುತ್ತಾರೆ. ಆದರೆ ಇಲ್ಲಿಂದ ದೆಹಲಿಗೆ ಹೋಗಬೇಕೆಂದರೆ ಹೋಗುವುದಕ್ಕೆ ಅಲ್ಲಿಯ ಪರಿಸ್ಥಿತಿಯ ಕಾರಣದಿಂದಾಗಿ ಕಷ್ಟವಾಗುತ್ತದೆ. ಮತ್ತೆ ಅಲ್ಲಿಯೇ ಇರುವವರು ಅಪ್ಪ, ಅಪ್ಪ ಆದ ಮೇಲೆ ಮಗ, ಮಗ ಆದ ಮೇಲೆ ಅಳಿಯ, ಆಮೇಲೆ ಮೊಮ್ಮಕ್ಕಳು ಹೀಗೆಲ್ಲ ಹೇಗೋ ನೌಕರಿಯನ್ನು ಅಲ್ಲಿ ಮಾಡಿಕೊಂಡಿದ್ದಾರೆ. ಮಾನ್ಯ ಸದಸ್ಯರು ಸಲಹೆಯನ್ನು ಏನು ಕೊಟ್ಟಿದ್ದಾರೆ, ಆ ಸಲಹೆಯನ್ನು ಕಾರ್ಯಗತಗೊಳಿಸಲು ಮತ್ತೊಂದು ಸಲ ಪ್ರಯತ್ನ ಮಾಡುತ್ತೇನೆ.

ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣ ಪ್ರಸ್ತಾವ

ಅಧ್ಯಕ್ಷರು: ಗಮನ ಸೆಳೆಯುವ ಸೂಚನೆ ಮುಗಿಯಿತು ಈಗ ಮಾನ್ಯ ವೈ.ಕೆ.ರಾಮಯ್ಯನವರು ಮಾತನಾಡಿ. ಇದರ ಜೊತೆಗೆ ಇನ್ನೊಂದು ವಿಷಯ. ರಾಜ್ಯಪಾಲರ ಭಾಷಣ ಮೇಲೆ ಮಾತನಾಡುವವರು ಸುಮಾರು 50 ಜನ ಇದ್ದಾರೆ. ನಾಳೆ ಸಂಜೆಯೊಳಗೆ ನಾವು ಮುಗಿಸಬೇಕು. ಇದನ್ನು ಯಾವ ರೀತಿ ಕಂಟ್ರೋಲ್ ಮಾಡುವುದು ಅರ್ಥವಾಗುತ್ತಿಲ್ಲ. ಮಾನ್ಯ ಬಿ.ಜೆ.ಪಿ. ನಾಯಕರು, ಮತ್ತು ವಿರೋಧ ಪಕ್ಷದ ನಾಯಕರು ಮತ್ತು ಚಂದ್ರೇಗೌಡರು ಮೂವರು ಕುಳಿತುಕೊಂಡು ಮಾತನಾಡಿ ನಾಳೆ ಸಾಯಂಕಾಲದೊಳಗೆ ಯಾರ್ಯಾರಿಗೆ ಎಷ್ಟೆಷ್ಟು ಗಂಟೆ ಎಂಬುದನ್ನು ಅಲಾಟ್ ಮಾಡಿದರೆ, ನೀವೇ ಸೆಲ್ಫ್ ಕಂಟ್ರೋಲ್ ಮಾಡಿಕೊಂಡು ಮಾತನಾಡಬೇಕಾಗುತ್ತದೆ.

ಶ್ರೀ ಎಸ್.ಎಸ್.ಪಾಟೀಲ್: ಮಾನ್ಯ ರಾಮಯ್ಯನವರು ಒಂದು ನಿಮಿಷ ಈಲ್ಡ್ ಆಗಬೇಕು. ಬಹುಶಃ ನಾವು ಏನೋ ಹಾಗೆಯೇ ಚರ್ಚೆ ಮಾಡುವುದು, ನಾವೊಂದು ಹೇಳುವುದು, ಅವರೊಂದು ಉತ್ತರ ಕೊಡುವುದು ಇದು ಸಮ್ಮನೆ ನಡೆಯುತ್ತಿದೆ. ಆದರೆ ನಿಜವಾಗಿ ನಾವು ಆ ಶ್ವೇತಪತ್ರವನ್ನು ನೋಡಿದರೆ, ಬಹುಶಃ ನನಗನ್ನಿಸುತ್ತದೆ. ಒಂದು ವಾರಗಟ್ಟಲೆ ಚರ್ಚೆ ಮಾಡಬೇಕೇ ಹೇಗೆ ತಿದ್ದಬೇಕು? ಮುಂದೆ ಈ ರಾಜ್ಯವನ್ನು ನಡೆಸುವುದು ಹೇಗೆ? ಇದರ ಬಗ್ಗೆ ವಿವರವಾದ ಚರ್ಚೆಯಾಗಬೇಕಾಗುತ್ತದೆ.

ಶ್ರೀ ಡಿ.ಬಿ. ಚಂದ್ರೇಗೌಡ: (ಕಾನೂನು, ಸಂಸದೀಯ ಸಚಿವರು) ರಾಜ್ಯಪಾಲರ ಭಾಷಣದ ಮೇಲೆ ಏನು ಮಾತನಾಡುತ್ತೀರಿ? ಡಿಮಾಂಡ್ಸ್ ಮೇಲೆ ಮಾತನಾಡಿ. ಶ್ವೇತಪತ್ರದ ಬಗ್ಗೆ ಡಿಮಾಂಡ್ಸ್ ಮೇಲೆ ಮಾತನಾಡಿ. ರಾಜ್ಯಪಾಲರ ಭಾಷಣ ಆದಮೇಲೆ ಶ್ವೇತಪತ್ರ ಬರುತ್ತದೆ.

ಶ್ರೀ ಎಸ್.ಎಸ್.ಪಾಟೀಲ್: ನಾನು ತಮ್ಮಲ್ಲಿ ವಿನಂತಿ ಮಾಡಿಕೊಳ್ಳುವುದೇನೆಂದರೆ,